ಕೋಜಾ ಬಂಣದ ಬಾಬತು ವಳದೇಕದ ಮತ್ತು ಹಸರು ಬಂಣದ ಬಾಬತು ಪರಾಯಿ ದೇಕದ ಇಂಪೀರಿಯಲ್ ಮನಿ ಆರ್ಡರುಗಳ ಪರಿವ್ಕರಿಸಲ್ಪಟ್ಟ ನಮೂನೆಗಳನ್ನು ಕುರಿತು.

ಟ್ರೆಜರಿ ಇಲಾಖೆ ಡೆಪ್ಯುಟಿ ಕಮ್ಮಿಷ್ನರ್‌ಗಳಿಗೆ ಮತ್ತು ಚಿತ್ರದುರ್ಗದ ಸಬ್ ಡಿವೀಜ್ಞ ಆಸಿಸ್ಟೆಂಟ್ ಕಮ್ಮಿಷನರಿಗೆ—ಸರಕಿಲರ್ ನಂಬರ್ 1637, ಮಲ್ಕುಂ 31ನೇ ಜುಲೈ 1885ನೇ ಇಸವಿ.

ಇಂಡ್ಯ ಗವರ್ಣಮೆಂಟಿನವಂದ ಈಚಿಗೆ ಜಾರೀಯುಲ್ಲಿ ತರಲ್ಪಟ್ಟ ಇಂಪೀರಿಯಲ್ ಮನಿ ಆರಡರುಗಳ ಹೊಸನಮೂನೆಗಳ ಪ್ರಕಾರ ಅಮಲ್ನಡಿಸುವ ವಿಷಯದಲ್ಲಿ, ಕಾಂಪ್ಟ್ರೋಲರ್‌ಯವರು ಇದರಡಿ ಕಂಡ ತಿಳುವಳಿಕೆಗಳಿಗೆ ನಿಗೆ ಕೊಡತಕ್ಕದ್ದೆಂದು ಕೋರು ತ್ತಾರೆ:—

ಮನಿ ಆರಡರು ಕೊಡುವಣ.

ಒಂದು ತಾಲ್ಲೂಕು ಯಾ ಡಿಸ್ಟ್ರಿಕ್ಟು ಟ್ರೆಜರಿಯಿಂದ ಇಂಪೀರಿಯಲ್ ಮನಿ ಆರಡರ್‌ಗಳು ಕೊಡುವಾಗ, 1884ನೇ ಇಸವಿ ಸೆಪ್ಟಂಬರ್ 25ನೇ ಮತ್ತುಂ ವುಳ್ಳ ಈ ಆಫೀಸ್ 1597ನೇ ನಂಬರ್ ಸರಕಿಲರ್‌ನಲ್ಲಿ ವಿಧಿಸಲ್ಪಟ್ಟ ನಡವಳಿತವು ಅನುಸರಿಸಲ್ಪಡುವದು. ಪರಾಯಿ ದೇಕದ ಮನಿ ಆರಡರುಗಳು ತಾಲ್ಲೂಕುಗಳಲ್ಲಿ ಪ್ರಾಯಶಃ ಅವಶ್ಯಕ ವಿರಲಾರದು; ಪರಂತು ಯೂರೋಪಿಯರ್ ಜನಗಳು ವಾಸವಾಗಿರುವ ತಾಲ್ಲೂಕು ಖಜಾನೆಗಳಿಗೆ ಕೆಲವು ಫಾರಂಗಳು ವಿತರಿಸಲ್ಪಡತಕ್ಕದ್ದು; ಮತ್ತು ಇತರ ಸ್ಥಳಗಳಲ್ಲಿ ಜೇಕಾಗಿದ್ದರೆ, ಅಮಲ್ದಾರರು ಡಿಸ್ಟ್ರಿಕ್ಟು ಟ್ರೆಜರಿ ಆಫೀಸರವರಿಗೆ ಬರದುಕೊಳ್ಳಬೇಕು.

ಮನಿ ಆರಡರ್ ಹಣವನ್ನು ಪಾವತಿ ಮಾಡುವಣ.

ಬೆಂಗಳೂರಲ್ಲಿಯ ಪೋಸ್ಟ್‌ಮಾಸ್ಟರಿಂದ ತಲಪುವ (ಯಲ್ಲವು ಇಂಡಿಯಾನೆ ವಳದೇಕದ ಫಾರಂಗಳಾದ್ದರಿಂದ) ಮನಿ ಆರಡರ್ ತಪಸೀಲೆಗಳನ್ನು C ಗುರ್ತುಳ್ಳ ರಿಜಿಸ್ಟ್ರಿನಲ್ಲಿ ದಾಖಲ್ಮಾಡಿದ ತರುವಾಯ ಟ್ರೆಜರಿ ಆಫೀಸರು ಆರಡರಿನ ಮೇಲೆ ಅಡ್ಡವಾಗಿ ಇಂಡಾರಸ್ ಮಾಡತಕ್ಕದ್ದು. ಹ್ಯಾಗಂದರೆ:—

"————ಟ್ರೆಜರಿಯಲ್ಲಿ ಪಾವತಿ ಆಗತಕ್ಕದ್ದು"
ತಾರೀಖು

ಡಿಸ್ಟ್ರಿಕ್ಟು ಟ್ರೆಜರಿ ಆಫೀಸರ್.

ಟ್ರೆಜರಿ ಆಫೀಸರರು ಪೂರಾ ಆರಡರನ್ನು ಪಣ ತೆಗದುಕೊಳ್ಳುವವನಿಗೆ ಅಂಚೇ ಮೂಲಕ ಕಳುಹಿಸತಕ್ಕದ್ದು. ಹಣ ತೆಗದುಕೊಳ್ಳುವವನು ಅದರಲ್ಲಿ ಕಂಡ ಟ್ರೆಜರಿಯಲ್ಲಿ ಹಾಜರ್ಮಾಡಿ, "ಆಕ್ಸ್ನಾಲೆಡ್ಜ್‌ಮೆಂಟ್ ಯಾನೆ ಪಾವತಿ ರಸೀತಿಯ ಬಗ್ಯೆ" ಮತ್ತು "ಪೇಯೀಸ್ ರಸೀಪ್ ಯಾನೆ ಹಣ ತೆಗದುಕೊಳ್ಳುವವನ ರಸೀತಿಗೂ" ಯರಜು ಕಡೆಯಲ್ಲಿಯೂ ರುಜುಮಾಡಿ, ಹಣವನ್ನ ತೆಗದುಕೊಳ್ಳತಕ್ಕದ್ದು. ಹೊಬಲಗು ಪಾವತಿ ಮಾಡುವ ಟ್ರೆಜರಿ ಆಫೀಸರು "ಕೂರ್ಪ" ಭಾಗವನ್ನು ಕತ್ತರಿಸಿ ಹಣ ತೆಗದುಕೊಳ್ಳುವವನಿಗೆ ಕೊಡತಕ್ಕದ್ದು. ತಾಲ್ಲೂಕು ಖಜಾನೆಯಲ್ಲಿ ಹೊಬಲಗು ಪಾವತಿ ಮಾಡಲ್ಪಟ್ಟರೆ, ಅಮಲ್ದಾರರು ಕೂರ್ಪ ಭಾಗವನ್ನು ಕತ್ತರಿಸಿ ಹಣ ತೆಗದುಕೊಳ್ಳುವವನಿಗೆ ಕೊಟ್ಟ ತರುವಾಯ, ಮನಿ ಆರಡರ್ ಫಾರಮಿನ ಉಳಿದ ಭಾಗವನ್ನು ತಮ್ಮ C ಲೆಕ್ಕದೊಂದಿಗೆ ಡಿಸ್ಟ್ರಿಕ್ಟು ಟ್ರೆಜರಿಗೆ ರವಾನಿಸತಕ್ಕದ್ದು. ಡಿಸ್ಟ್ರಿಕ್ಟು ಟ್ರೆಜರಿ ಆಫೀಸರರು "ಪಾವತಿ ರಸೀತಿಯ" ಭಾಗವನ್ನು ಕತ್ತರಿಸಿ ಅದನ್ನು ಈಗಿನಂತೆಯೇ ಬೆಂಗಳೂರು ಪೋಸ್ಟ್‌ಮಾಸ್ಟರಿಗೆ ರವಾನಿಸತಕ್ಕದ್ದು. ಫಾರಮಿನ ಉಳಿದ ಭಾಗವನ್ನು, ಅವರು ಈ ಆಫೀಸಿಗೆ ಕಳುಹಿಸುವ ಮನಿ ಆರಡರ್ ಲೆಕ್ಕಕ್ಕೆ ಪೌಚರಾಗಿ ಉಪಯೋಗಿಸತಕ್ಕದ್ದು.

ಹೆಚ್. ಹಡಿಸ್ಸ,
ಕಾಂಪ್ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್‌ಜಡ್ಜ್ರೀಯವರ ಕೋರ್ಟಿನಲ್ಲಿ.

ವಿವಾಯಿಯಾವ ಪಿಕ್ಕಿದೇವೇದಾರ ಗೋರಿಬಿದನೂರು ತಾಲ್ಲೂಕು ಕಾಮಗಾನಪಳ್ಳಿ ಬೈರಪ್ಪನ ವಿಷಯದಲ್ಲಿ—
ಸ್ ಈ 1885ನೇ ಇಸವಿ ದಿವಾಳಿ ಕೇಸ್ ನಂಬರು 32.

ಮೇಲ್ಕಂಡ ಬೈರಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜ್ರೀರು ಸಿ. ಕೈಸ್ ಸಾಹೇಬರ ರೂಬರೂ ಅರ್ಜೀದಾರನಾದ ಬೈರಪ್ಪನ ವರವಾಗಿ ಪಿ. ನಂಜುಂಡಯ್ಯನವರನ್ನು ದರ್ಯಾಫ್ತು ಮಾಡಲ್ಪಟ್ಟಿತು.